ಇಂಜಿನಿಯರಿಂಗ್ ಉಪವಿಭಾಗ, ಚನ್ನರಾಯಪಟ್ಟಣ ಇವರು ಅಂದಾಜು ಪಟ್ಟಿ, ನೀಲಿ ನಕ್ಷೆ ತಯಾರಿಸಿದ್ದು, ಜಿಲ್ಲಾಪರಿಷತ್ ಹಾಸನ ಇವರ ಮಂಜೂರಾತಿಗಾಗಿ ದಿನಾಂಕ: 22-8-92ರಲ್ಲಿ ಸಲ್ಲಿಸಿರುವರು. ಜಿಲ್ಲಾಪರಿಷತ್‌ನವರೊಂದಿಗೆ, ಜಿಲ್ಲಾಧಿಕಾರಿಗಳೊಂದಿಗೆ ವ್ಯವಹರಿಸಿ, ಶಾಲೆಗೆ ಕಾಂಪೌಂಡ್ ನಿರ್ಮಿಸುವಲ್ಲಿ ಕ್ರಮ ಕೈಗೊಳ್ಳಲಾಗುವುದು.

ಇ) ಹೌದು

ಈ) ಗಮನಕ್ಕೆ ಬಂದಿದೆ.

ಉ) ಈ ಶಾಲೆಯು ಪಟ್ಟಣ ಪ್ರದೇಶದಲ್ಲಿ ಬರುತ್ತಿರುವುದರಿಂದ ಕೂಡಲೇ ಜಿಲ್ಲಾಧಿಕಾರಿಗಳು ಹಾಸನ ಇವರೊಂದಿಗೆ ವ್ಯವಹರಿಸಿ ಸದರಿ ಶಾಲಾ ಕಟ್ಟಡದ ದುರಸ್ತಿ ಪಡಿಸುವ ಬಗ್ಗೆ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು.

ಡಾ: ಎನ್. ಬಿ. ನಂಜಪ್ಪ:- ಸನ್ಮಾನ್ಯ ಅಧ್ಯಕ್ಷರೆ, ಚನ್ನರಾಯಪಟ್ಟಣದ ಸಂತೆ ಮೈದಾನದಲ್ಲಿ ಒಂದು ಹೈಸ್ಕೂಲ್ ಬಹಳ ದಿನಗಳಿಂದ ಇದೆ, ಇದು ಸಂತೆ ಮೈದಾನಕ್ಕೆ ಸೇರಿಕೊಂಡಿರುವುದರಿಂದ, ಅದಲ್ಲದೆ ಇದಕ್ಕೆ ಕಾಂಪೌಂಡ್ ಇಲ್ಲದೇ ಇರುವುದರಿಂದ ಅಲ್ಲಿ ಸಂತೆ ನಡೆಯುವುದರಿಂದ ಗಲಾಟೆಯಾಗಿ ಮಕ್ಕಳಿಗೆ ತುಂಬಾ ತೊಂದರೆಯಾಗುತ್ತಿದೆ. ಇದರ ಬಗ್ಗೆ ನಾನು ಅನೇಕ ಸಾರಿ ಸರ್ಕಾರಕ್ಕೆ, ಜಿಲ್ಲಾ ಪರಿಷತ್ತಿಗೆ ಬರೆದರೂ ಕೂಡ ಇದುವರೆಗೆ ಆ ಕಾಂಪೌಂಡನ್ನು ಹಾಕಿಸಿರುವುದಿಲ್ಲ. ಆ ಸಂತೆಯ ಗಲಾಟೆಯಿಂದ ಮಕ್ಕಳಿಗೆ ತೊಂದರೆಯಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ ? ಯಾವಾಗ ಆ ಶಾಲೆಗೆ ಕಾಂಪೌಂಡನ್ನು ಹಾಕಿಸುತ್ತೀರಿ ?

ಎರಡನೆಯದಾಗಿ ಅಲ್ಲಿ ಒಂದು ಮಾಧ್ಯಮಿಕ ಶಾಲೆ ಇದೆ, ಇದು ಸುಮಾರು 100 ವರ್ಷದ ಹಳೆಯ ಕಟ್ಟಡದಲ್ಲಿದೆ. ಆ ಕಟ್ಟಡ ಚೆನ್ನಾಗಿದೆ, ಆದರೆ ಅದಕ್ಕೆ ರಿಪೇರಿ ಇಲ್ಲದೆ ಅದು ಸಂಪೂರ್ಣವಾಗಿ ನಶಿಸಿಹೋಗುವ ಮಟ್ಟದಲ್ಲಿದ್ದು ಮಕ್ಕಳು ಮಳೆಗಾಲದಲ್ಲಿ ಅದರೊಳಗೆ ಕುಳಿತುಕೊಳ್ಳಲು ಆಗುವುದಿಲ್ಲ, ಇದರ ಬಗ್ಗೆಯೂ ಕೂಡ ಅನೇಕ ಸಲ ಸರ್ಕಾರಕ್ಕೆ ತಿಳಿಸಿದ್ದರೂ, ಈ ಕಟ್ಟಡಕ್ಕೆ ರಿಪೇರಿಯಾಗಲಿ, ವಾರ್ಷಿಕ ರಿಪೇರಿಯಾಗಲಿ ಮಾಡಿರುವುದಿಲ್ಲ, ದಯವಿಟ್ಟು ಅದನ್ನು ಯಾವಾಗ ಮಾಡುತ್ತೀರಿ ?

ಡಾ: ಹೆಚ್. ಡಿ. ಲಮಾಣಿ: ಸನ್ಮಾನ್ಯ ಅಧ್ಯಕ್ಷರೆ, ಆ ಶಾಲೆಯು ಸಂತೇ ಮೈದಾನದ ಹತ್ತಿರವಿರುವುದು ನಿಜ. ಆ ಶಾಲೆಯನ್ನು ಅಲ್ಲಿ ಕಟ್ಟಿದ್ದೆ ಮೊದಲನೆ ಅಭಾಸವಾದ ವಿಚಾರ. ಶಾಲೆಯ ಎದುರಿಗೇ ಸಂತೆ ನಡೆಯುತ್ತದೆ. ಆದುದರಿಂದ ಮಕ್ಕಳಿಗೆ ಮತ್ತು ಪಾಠ ಹೇಳುವ ಶಿಕ್ಷಕರಿಗೆ ತೊಂದರೆಯಾಗುತ್ತದೆ. ಆದುದರಿಂದ ಸದರಿ ಶಾಲೆಗೆ ಸುತ್ತಲೂ ಕಾಂಪೌಂಡ್ ಕಟ್ಟಲು ಈಗಾಗಲೇ ಕಾರ್ಯಕ್ರಮ ಹಾಕಿದ್ದೇವೆ. ಅದರ ನೀಲಿ ನಕ್ಷೆಯನ್ನೂ ಕೂಡ ತಯಾರಿಸಿ, ಅದರ ಅಂದಾಜು ಪಟ್ಟಿಯನ್ನು ತಯಾರಿಸಿ ಮಂಜೂರಾತಿಗಾಗಿ 22-8-92ರಲ್ಲಿ ಕಳಿಸಿಕೊಟ್ಟಿದ್ದೇವೆ. ಇದಕ್ಕೆ ಮಂಜೂರಾತಿ ಬಂದ ಕೂಡಲೆ ಆ ಕಾಂಪೌಂಡ್‌ನ ಗೋಡೆಯನ್ನು ಕಟ್ಟಲು ಜಿಲ್ಲಾಪರಿಷತ್ತಿಗೆ ನಿರ್ದೇಶನವನ್ನು ಕೊಡುತ್ತೇವೆ. ಅದನ್ನು ಆದಷ್ಟು ಬೇಗ ಕಟ್ಟಿಕೊಡತಕ್ಕ ವ್ಯವಸ್ಥೆ ಮಾಡುತ್ತೇವೆ.

ಇನ್ನು ಎರಡನೆಯದಾಗಿ ಬೇರೆ ಶಾಲೆಯೊಂದು ಸೇರುತ್ತಿದೆ, ಅದರ ರಿಪೇರಿ ಅವಶ್ಯಕತೆ ಇದೆ ಎನ್ನುವ ಮಾತನ್ನು ಹೇಳಿದ್ದಾರೆ. ಆ ಶಾಲೆಯನ್ನು ರಿಪೇರಿ ಮಾಡಿಸಲು ಹಣವನ್ನು ಬಿಡುಗಡೆ ಮಾಡಲು ನಮ್ಮ ಅಧಿಕಾರಿಗಳಿಗೆ ಹೇಳಿ, ರಿಪೇರಿ ಮಾಡಿಸಿ ಕೊಡುತ್ತೇನೆ.

ಸೀಗೆಹಳ್ಳಿ ಅರಣ್ಯ ವಲಯದಲ್ಲಿ ನೀಲಗಿರಿ ಮರದ ಕಾನೂನುಬಾಹಿರ ಮಾರಾಟ

305 (1799): ಶ್ರೀ ಎಸ್. ರುದ್ರಪ್ಪ (ತುರುವೇಕೆರೆ):-

ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1) ತುರುವೇಕೆರೆ ತಾಲ್ಲೂಕು ಸೀಗೆಹಳ್ಳಿ ವಲಯದಲ್ಲಿ ನೀಲಗಿರಿ ಮರವನ್ನು ಕದ್ದು ಮಾರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಬಂದಿದ್ದರೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ಸಚಿವರು):-

1) ಹೌದು.

2) ಅಕ್ರಮ ಕಡಿತಲೆಯನ್ನು ತಡೆಯಲು ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡು ಕಾನೂನು ರೀತಿಯ ಕ್ರಮ ಜರುಗಿಸಲಾಗಿದೆ. ಸೀಗೆಹಳ್ಳಿಯ ವ್ಯಾಪ್ತಿಯಲ್ಲಿ ಬರುವ ಅರಣ್ಯ ರಕ್ಷಿಸಲು ಅಲ್ಲಿಗೆ ಒಬ್ಬ ವನಪಾಲಕ ಮತ್ತು ಒಂದು ಅರಣ್ಯ ರಕ್ಷಕರು ಮತ್ತು ಒಂದು ಅರಣ್ಯ ವೀಕ್ಷಕರನ್ನು ನೇಮಿಸಲಾಗಿದೆ. ವನಪಾಲಕರ ಕೇಂದ್ರ ಸ್ಥಾನವನ್ನು ಸಹ ತುರುವೇಕೆರೆಯಲ್ಲಿ ನಿಗದಿಪಡಿಸಲಾಗಿದೆ. ಅಕ್ರಮವಾಗಿ ಮರ ಕಡಿದವರ ಮೇಲೆ ಈ ಕೆಳಕಂಡಂತೆ ಮೊಕದ್ದಮೆ ದಾಖಲಾತಿ ಮಾಡಲಾಗಿದೆ.

1990-91	–3 ಪ್ರಕರಣಗಳು
1991-92	– 6 ಪ್ರಕರಣಗಳು
1992-93	– 10 ಪ್ರಕರಣಗಳು

ಸದರಿ ಮೊಕದ್ದಮೆಗಳಿಗೆ ಸಂಬಂಧಿಸಿದಂತೆ 1276 ನೀಲಗಿರಿ ತೀರುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಶ್ರೀ ಎಸ್. ರುದ್ರಪ್ಪ:- ಮಾನ್ಯ ಅಧ್ಯಕ್ಷರೆ, ನಮ್ಮ ತಾಲ್ಲೂಕಿನ ಸೀಗೆ ಹಳ್ಳಿ ಎನ್ನತಕ್ಕ ಗ್ರಾಮದಲ್ಲಿ ಅರಣ್ಯವಲಯ ಇದೆ. ಪ್ರತಿದಿನ ಅಲ್ಲಿ 50 ರಿಂದ 500 ನೀಲಗಿರಿ ಮರಗಳನ್ನು ಕಡಿದು ಮಾರುತ್ತಿದ್ದಾರೆ. ಒಂದು ಮರದ ಬೆಲೆ ಸುಮಾರು 500 ರೂ. ನಿಂದ 1000 ರೂಪಾಯಿವರೆಗೆ ಬೆಲೆ ಬಾಳುತ್ತದೆ. ಇಂಥ ಮರಗಳನ್ನು ರಾತ್ರಿ ಹೊತ್ತು ಕಡಿದು ಟ್ರ್ಯಾಕ್ಟರ್‌ನಲ್ಲಿ ತುಂಬಿಕೊಂಡು ಬಂದು ಮಾರಾಟ ಮಾಡಿಕೊಂಡು ಹೋಗುತ್ತಿದ್ದಾರೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದರೆ 13 ಪ್ರಕರಣಗಳನ್ನು ರಿಜಿಸ್ಟರ್ ಮಾಡಲಾಗಿದೆ ಎಂದು ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಈ ರೀತಿ ಕಳ್ಳಸಾಗಾಣಿಕೆ ಇವತ್ತೂ ಕೂಡ ನಡೆಯುತ್ತಲೇ ಇದೆ. ಈ ಒಂದು ಕೆಲಸದಲ್ಲಿ ಒಳ್ಳೊಳ್ಳೆಯ ವ್ಯಕ್ತಿಗಳು, ರಾಜಕೀಯ ವ್ಯಕ್ತಿಗಳು, ಇಲಾಖೆಯ ಅಧಿಕಾರಿಗಳೂ ಸೇರಿ ಮಾಡುತ್ತಿದ್ದಾರೆ. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಂ.ಪಿ. ಕೇಶವಮೂರ್ತಿ:- 1990ರಿಂದ 93ರವರೆಗೆ 19 ಪ್ರಕರಣಗಳು ನಮ್ಮ ಗಮನಕ್ಕೆ ಬಂದಿವೆ. 1276 ನೀಲಗಿರಿ ತೀರುಗಳನ್ನು ವಶಪಡಿಸಿಕೊಂಡಿದ್ದೇವೆ. ಕಳ್ಳಸಾಗಣೆದಾರರ ವಿರುದ್ಧ ಕೇಸ್ ರಿಜಿಸ್ಟರ್ ಮಾಡಿದ್ದೇವೆ. ಅಲ್ಲಿ ಈಗ ಈ ಕಳ್ಳಸಾಗಾಣಿಕೆಯನ್ನು ತಡೆಗಟ್ಟಲು ವಾಚರ್ ಫಾರೆಸ್ಟ್ ಆಫೀಸನ್ನು ತೆಗೆದಿದ್ದೇವೆ. ವಾಚರ್ ಗಾರ್ಡ್ ಮತ್ತು ವಿಶೇಷವಾಗಿ ಒಬ್ಬ ಫಾರೆಸ್ಟರನ್ನು ನೇಮಕ ಮಾಡಿದ್ದೇವೆ. ಗ್ರಾಮಾಂತರ ಪ್ರದೇಶದಲ್ಲಿ ಸರ್ಕಾರದ ತೋಪುಗಳನ್ನು ರಕ್ಷಣೆ ಮಾಡುವುದಕ್ಕೆ ಗ್ರಾಮೀಣ ಪ್ರದೇಶಗಳಲ್ಲಿ ತಾಲ್ಲೂಕುಮಟ್ಟದ ಸಮಿತಿಗಳನ್ನು ನೇಮಕ ಮಾಡಬೇಕಾಗಿದೆ. ಈ ಸಮಿತಿಗಳನ್ನು ರಚನೆ ಮಾಡಿದ ಮೇಲೆ ಈ ಮರಗಳ್ಳತನ ಕಡಿಮೆಯಾಗುತ್ತದೆಂದು ಅಂದುಕೊಂಡಿದ್ದೇವೆ.

ಶ್ರೀ ಎಸ್. ರುದ್ರಪ್ಪ:- ಇದನ್ನು ವಾಚ್ ಮಾಡುವ ಸಲುವಾಗಿ ಕೆಲವು ಅಧಿಕಾರಿಗಳನ್ನು ಅಲ್ಲಿ

ಇಟ್ಟಿದ್ದೇವೆಂದು ಹೇಳುತ್ತಿದ್ದೀರಿ. ಆದರೆ ಅಲ್ಲಿ ಯಾವ ಅಧಿಕಾರಿಗಳೂ ಇರುವುದಿಲ್ಲ. ಆ ಅಧಿಕಾರಿಗಳೇ ಶಾಮೀಲಾಗಿ ಈ ಕಳ್ಳತನವನ್ನು ಮಾಡಿಸುತ್ತಿದ್ದಾರೆ. ಇಂಥ ವ್ಯಕ್ತಿಗಳ ವಿರುದ್ಧ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ. ಒಳ್ಳೆಯ ರಾಜಕೀಯ ವ್ಯಕ್ತಿಗಳೇ ಇದರಲ್ಲಿ ಸೇರಿದ್ದಾರೆ. ಕಳೆದ ಸುಮಾರು 20 ವರ್ಷಗಳಿಂದ ಈ ರೀತಿ ಮರಗಳನ್ನು ಕಡಿದು ಮಾರುತ್ತಿದ್ದಾರೆ. ಈ ಸದನದಲ್ಲಿ ಇದರ ಬಗ್ಗೆ ನಾನು ಎರಡು ಸಾರಿ ಪ್ರಶ್ನೆಗಳನ್ನು ಕೇಳಿದ್ದೇನೆ. ಆದರೂ ಇದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ನಾನೇ ಖುದ್ದು ಆ ಸ್ಥಳಕ್ಕೆ ಹೋಗಿಬಂದಿದ್ದೇನೆ. ಅಲ್ಲಿ ಯಾವ ಅಧಿಕಾರಿಯೂ ಇಲ್ಲ. ತುರುವೇಕೆರೆಯಲ್ಲಿ ಒಬ್ಬ ಅಧಿಕಾರಿಯನ್ನು ಇಟ್ಟಿದ್ದೇವೆಂದು ಹೇಳುತ್ತಿದ್ದೀರಿ. ಆದರೆ ಅಲ್ಲಿ ಆಫೀಸೂ ಇಲ್ಲ, ಅಧಿಕಾರಿಯೂ ಇಲ್ಲ. ಹೀಗಾದರೆ ನಮ್ಮ ಅರಣ್ಯ ಎಲ್ಲಿ ಉಳಿಯುತ್ತದೆ? ಈ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಂಡು ಯಾರು ಸರಿಯಾಗಿ ಕೆಲಸ ಮಾಡುವುದಿಲ್ಲ ಅವರನ್ನು ಸಸ್ಪೆಂಡ್ ಮಾಡಿದರೆ ಮಾತ್ರ ನಮ್ಮ ಅರಣ್ಯ ಉಳಿಯುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಎಂ.ಪಿ. ಕೇಶವಮೂರ್ತಿ:– ತಪ್ಪಿತಸ್ಥ ಅಧಿಕಾರಿಗಳು ಯಾರು ಎಂದು ಹೇಳಿದರೆ ಅವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಈ ಕೂಡಲೇ ನಮ್ಮ ಸಂಬಂಧಪಟ್ಟ ಡಿ.ಎಫ್.ಓ. ರವರನ್ನು ಅಲ್ಲಿಗೆ ಕಳುಹಿಸಿ ತನಿಖೆ ಮಾಡಿಸಿ ಶಾಮೀಲಾಗಿರತಕ್ಕ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ರಾಜ್ಯದಲ್ಲಿರುವ ಸಹಾಯಕ ಶಿಕ್ಷಣಾಧಿಕಾರಿಗಳ ಸಂಖ್ಯೆ

306 (1810): ಶ್ರೀ ಮನೋಹರ ಯು. ಐನಾಪುರ, (ಬಳ್ಳೊಳ್ಳಿ):–

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1) ರಾಜ್ಯದಲ್ಲಿನ ಸಹಾಯಕ ಶಿಕ್ಷಣಾಧಿಕಾರಿಗಳ ಸಂಖ್ಯೆ ಎಷ್ಟು;

2) ಎಷ್ಟು ಮಂದಿ ಸಹಾಯಕ ಶಿಕ್ಷಣಾಧಿಕಾರಿಗಳಿಗೆ ವಾಹನ ಸೌಲಭ್ಯ ಒದಗಿಸಿದೆ;

3) ಸಹಾಯಕ ಶಿಕ್ಷಣಾಧಿಕಾರಿಗಳು ದಕ್ಷತೆಯಿಂದ ಕಾರ್ಯನಿರ್ವಹಿಸಲು ವಾಹನ ಸೌಲಭ್ಯ ಒದಗಿಸಲು ಸರ್ಕಾರದ ಯೋಜನೆಯಲ್ಲಿದೆಯೇ ?

ಡಾ: ಹೆಚ್. ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

1) 190.

2) ಒದಗಿಸಿಲ್ಲ.

3) ಇಲ್ಲ

ಶ್ರೀ ಮನೋಹರ್ ಯು. ಐನಾಪುರ:– ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಸುಮಾರು 190 ಸಹಾಯಕ ಶಿಕ್ಷಣಾಧಿಕಾರಿಗಳಿದ್ದಾರೆ. ಪ್ರತಿಯೊಬ್ಬ ಸಹಾಯಕ ಶಿಕ್ಷಣಾಧಿಕಾರಿಗೂ 100ರಿಂದ 120 ಹಳ್ಳಿ, ಹ್ಯಾಂಲೆಟ್ಸ್, ತಾಂಡಗಳು ಬರುತ್ತವೆ. ಅದರಲ್ಲಿ ಸುಮಾರು 200–250 ಶಾಲೆಗಳನ್ನು ಅಲ್ಲಿನ ಶಿಕ್ಷಕರು ಯಾವ ರೀತಿ ಕೆಲಸ ಮಾಡುತ್ತಿದ್ದಾರೆಂಬುದನ್ನು ಇವರು ಹೋಗಿ ಭೇಟಿ ಕೊಟ್ಟು ನೋಡಿಕೊಂಡು ಬರಬೇಕಾಗುತ್ತದೆ. ಈ ಎ.ಇ.ಓ.ಗಳಿಗೆ ಯಾವುದೇ ವಾಹನವೂ ಇಲ್ಲದೆ ಬಸ್ಸು, ಸೈಕಲ್ ಇಲ್ಲವೇ ಅನೇಕ ಸಂದರ್ಭಗಳಲ್ಲಿ ನಡೆದುಕೊಂಡೂ ಕೂಡ ಹೋಗಬೇಕಾಗುತ್ತದೆ. ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಶಾಲೆಗಳು ಬಹಳ ದೂರವಿರುತ್ತವೆ. ಇಂಥ ಸಂದರ್ಭಗಳಲ್ಲಿ ಈ ಎ.ಇ.ಓ.ಗಳು